**ಓ ಎಸ್ ನಂಃ 418-14**
**ಪಿ ಡಬ್ಲ್ಯೂ ಃ 2**

**ದಿಃ 16-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ಶ್ರೀಧರ್ ಮೂರ್ತಿರವರು ತಾವು ತೀರಿಕೊಳ್ಳುವ ಮೊದಲು ಒಂದು ಮೃತ್ಯುಪತ್ರವನ್ನು ಮಾಡಿದ್ದು ಆ ಮೃತ್ಯುಪತ್ರದ ಪ್ರಕಾರ ಆಸ್ತಿಗಳನ್ನು 7 ನೇ ಪ್ರತಿವಾದಿ, 10 ನೇ ಪ್ರತಿವಾದಿ ಮತ್ತು ಅಮರೇಶ್ ರವರು ಸಮನಾಗಿ ಹಂಚಿಕೊಳ್ಳಬೇಕು ಎಂಬುದಾಗಿ ಬರೆದಿದ್ದರು ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರದ ಪ್ರಕಾರ ಸರ್ವೆ ನಂ 31/3 ನ್ನು ಮಾರಾಟ ಮಾಡಿ ಶಾರದಮ್ಮರವರಿಗೆ 2 ಲಕ್ಷ ರೂಗಳನ್ನು ಕೊಡಬೇಕೆಂದು ಬರೆಯಲಾಗಿತ್ತು ಮತ್ತು ಜನಾರ್ಧನ್ ಮೂರ್ತಿರವರಿಗೆ 6 ಲಕ್ಷ ರೂಗಳನ್ನು ಕೊಡಬೇಕೆಂದು ಬರೆಯಲಾಗಿತ್ತು ಮತ್ತು 1 ನೇ ಪ್ರತಿವಾದಿಗೆ 6 ಲಕ್ಷ ರೂಗಳನ್ನು ಕೊಡಬೇಕೆಂದು ಬರೆಯಲಾಗಿತ್ತು ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿಯೊಬ್ಬ ಹೆಣ್ಣು ಮಕ್ಕಳಿಗೆ ತಲಾ 2 ಲಕ್ಷ ರೂಗಳನ್ನು ಕೊಡಬೇಕೆಂದು ಬರೆಯಲಾಗಿತ್ತು ಎಂದರೆ ಸರಿಯಲ್ಲ. ಶ್ರೀಧರ್ ಮೂರ್ತಿಗಳು ತಮ್ಮ ಅಂತಿಮ ಸಂಸ್ಕಾರಕ್ಕೆ 20 ಸಾವಿರ ರೂಗಳನ್ನು ಇಟ್ಟಿದ್ದು ಸದರಿ ಹಣದಿಂದಲೇ ಅವರ ಅಂತ್ಯಸಂಸ್ಕಾರವನ್ನು ಮಾಡಿದ್ದು ಯಾರು ಹಣ ಖರ್ಚು ಮಾಡಿಲ್ಲ ಎಂದರೆ ಶ್ರೀಧರ್ ಮೂರ್ತಿರವರ ಬ್ಯಾಂಕ್ ಖಾತೆಯಲ್ಲಿದ್ದ ಹಣದಿಂದ ಅವರ ಅಂತ್ಯ ಸಂಸ್ಕಾರ ಮಾಡಲಾಗಿದೆ ಎಂದು ಹೇಳುತ್ತಾರೆ.
ಮರು ವಿಚಾರಣೆಃ ಇಲ್ಲ.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**